## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 61 |
| ಮಾನ್ಯ ಸದಸ್ಯರ ಹೆಸರು | ಶ್ರೀ. ಕೆ.ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 4.12.2023 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಬೆನ್ನುಹುರಿ ಅಪಘಾತಗೊಂಡ ದಿವ್ಯಾಂಗರಿಗಾಗಿ ಸರ್ಕಾರವು ಹೊರಡಿಸಿರುವ ಆದೇಶವನ್ನು ಸಮರ್ಪಕವಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು) | ದಿನಾಂಕ:10.08.2011 ರಂದು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ ಬೆನ್ನುಹುರಿ ಅಪಘಾತದ ದಿವ್ಯಾಂಗರಿಗೆ ಮೂಲಭೂತ ಪರಿಕರಗಳು/ಔಷಧಿಗಳನ್ನು ಆರೋಗ್ಯ ರಕ್ಷಾ ಸಮಿತಿ (ARS) ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ಮುಕ್ತ ನಿಧಿ ಅನುದಾನದಲ್ಲಿ ಅವಶ್ಯಕತೆಗೆ ತಕ್ಕಂತೆ ಖರೀದಿಸಿ ಪೂರೈಸಲು ಆದೇಶಿಸಲಾಗಿದೆ.<br><br>ಕರ್ನಾಟಕ ಡ್ರಗ್ಸ್ & ಲಾಜಿಸ್ಟಿಕ್ ವೇರ್ ಹೌಸ್ ಸೊಸೈಟಿ, ಬೆಂಗಳೂರು ಇವರಿಂದ ಸರಬರಾಜಾಗುತ್ತಿರುವ ಪರಿಕರಗಳು/ಔಷಧಿಗಳನ್ನು ಸಹ ಉಪಯೋಗಿಸಲು ತಿಳಿಸಲಾಗಿದೆ. |
| ಆ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು. ನಡವಳಿ ದಿನಾಂಕ:10.08.2011ರ ಆದೇಶದಂತೆ ಬೆನ್ನುಹುರಿ ಅಪಘಾತಕ್ಕೆ ಒಳಗಾದ ಪರಿಣಾಮವಾಗಿ ಕುತ್ತಿಗೆ ಕೆಳಭಾಗ, ಸೊಂಟದ ಕೆಳಭಾಗ, ಸ್ಪರ್ಶ ಜ್ಞಾನ ಮತ್ತು ನಿಯಂತ್ರಣ ಇಲ್ಲದಿರುವುದು ಮಲಮೂತ್ರ ಹೋಗುವುದು ಗೊತ್ತಾಗದೆ ಜೀವನವಿಡಿ ಗಾಲಿ ಕುರ್ಚಿಗಳಲ್ಲಿ ಇನ್ನೊಬ್ಬರ ಸಹಾಯದಿಂದ ಬದುಕಬೇಕಾಗಿದ್ದು, ಅದರಲ್ಲೂ ಗ್ರಾಮೀಣ ಭಾಗದಲ್ಲೂ ಈ ಸಮಸ್ಯೆಗಳು ಹೆಚ್ಚಾಗಿ ಕಂಡುಬರುತ್ತಿರುವ ನಿಟ್ಟಿನಲ್ಲಿ ಸರ್ಕಾರವು ಅಗತ್ಯ ಕ್ರಮವಹಿಸಿ ತನ್ನ ಆದೇಶವನ್ನು ಸರ್ಮಪಕವಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ತೆಗೆದುಕೊಂಡ ಸೂಕ್ತ ಕ್ರಮಗಳೇನು; (ಮಾಹಿತಿ ನೀಡುವುದು) | ಪ್ಯಾಲಿಯೇಟೀವ್ ಕೇರ್ ಯೋಜನೆಯನ್ನು (ಉಪಶಮನ ಆರೈಕೆ) 30 ಜಿಲ್ಲಾ ಆಸ್ಪತ್ರೆಗಳಲ್ಲಿ ಅವಶ್ಯಕ ಉಪಕರಣಗಳೊಂದಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ಎನ್.ಸಿ.ಡಿ ಕಾರ್ಯಕ್ರಮದಡಿಯಲ್ಲಿ 2016 ರಿಂದ ಪ್ರಾರಂಭಿಸಲಾಗಿದೆ. ನೀಡಲಾದ ಚಿಕಿತ್ಸೆ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಜಿಲ್ಲಾ ಆಸ್ಪತ್ರೆಗಳಲ್ಲಿ 2 Physician, 8 Staff Nurse ಹಾಗೂ 2 Multi task workers ಹುದ್ದೆಗಳನ್ನು ಒಳಗೊಂಡಂತೆ Palliative Care ಘಟಕ ಕಾರ್ಯನಿರ್ವಹಿಸುತ್ತಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 30 ಜಿಲ್ಲಾ NCD Clinic ಗಳನ್ನು ಸ್ಥಾಪಿಸಲಾಗಿದ್ದು, 30 Physiotherapist ಹುದ್ದೆ ಮಂಜೂರಾಗಿರುತ್ತದೆ.<br><br>ಬೆಂಗಳೂರಿನಲ್ಲಿ ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯು ಸಹ ಬೆನ್ನು ಹುರಿ ಪೆಟ್ಟಿನಿಂದ ಉಂಟಾಗುವ ನರ ದೌರ್ಬಲ್ಯಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.<br><br>ಕೆ.ಸಿ ಜನರಲ್ ಆಸ್ಪತ್ರೆ, ಸರ್.ಸಿ.ವಿ ರಾಮನ್ ಆಸ್ಪತ್ರೆ ಮತ್ತು ಜಯನಗರ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸಹ Physiotherapy ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿಯೂ ಸಹ ಇಂತಹ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.<br><br>ಮುಂದುವರೆದು SVYM(ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್) ರವರೊಡನೆ ಸಹ ಒಪ್ಪಂದ ಮಾಡಿಕೊಂಡಿದ್ದು, ಧಾರವಾಡ, ಹಾಸನ, ಮೈಸೂರು ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿ SVYM ಸಂಸ್ಥೆಯಿಂದ ಉಪಶಾಮಕ ಆರೈಕೆ ಸೇವೆಗಳನ್ನು ನೀಡಲಾಗುತ್ತಿದೆ .ವಿವರವನ್ನು **ಅನುಬಂಧ-2** ರಲ್ಲಿ ನೀಡಿದೆ. |

| | | |
|---|---|---|
| ಇ | ಬೆನ್ನುಹುರಿ ಅಪಘಾತಕ್ಕೆ ಒಳಗಾಗಿರುವ ದಿವ್ಯಾಂಗರಿಗೆ ಸಹಾಯಕ ಮಾಡುವ ನಿಟ್ಟಿನಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಆರ್ಥಿಕ ನೆರವಿಲ್ಲದೆ ಅವರ ಕಾರ್ಯಚಟುವಟಿಕೆ ಕುಂಠಿತವಾಗುತ್ತಿದ್ದು, ಸದರಿ ಸಂಸ್ಥೆಗಳಿಗೆ ಸಹಾಯ ಧನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಸರ್ಕಾರ ಈ ಕುರಿತಂತೆ ಕೈಗೊಂಡ ಕ್ರಮಗಳೇನು? | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಯಾವುದೇ ನಿರ್ದಿಷ್ಟ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. NGO ಸಂಸ್ಥೆಗಳಿಗೆ ಸರ್ಕಾರದ ವತಿಯಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. |

**ಆಕುಕ 66 ಎಸ್‌ಎಂಎಂ 2023**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**
**ಸಚಿವರು**

ಅನುಬಂಧ- 01

| NPPC DATA April 2023 to September 2023 | | | | |
|---|---|---|---|---|
| Sl. NO | District | No. of OPD | No. of IPD | Home Based Care Services |
| 1 | Bagalkote | 198 | 17 | 0 |
| 2 | Bangalore Rural | 173 | 229 | 7 |
| 3 | Bangalore Urban | 0 | 0 | 0 |
| 4 | Belagavi | 29 | 4 | 6575 |
| 5 | Bellary | 600 | 60 | 2227 |
| 6 | Bidar | 55 | 3 | 0 |
| 7 | Chamarajanagara | 75 | 0 | 922 |
| 8 | Chikkaballapura | 64 | 48 | 7 |
| 9 | Chikkamagaluru | 3733 | 169 | 0 |
| 10 | Chitradurga | 0 | 0 | 1529 |
| 11 | Dakshina Kannada | 871 | 82 | 17233 |
| 12 | Davanagere | 38 | 12 | 0 |
| 13 | Dharwad | 276 | 37 | 3266 |
| 14 | Gadag | 0 | 0 | 354 |
| 15 | Hassan | 145 | 129 | 238 |
| 16 | Haveri | 32 | 20 | 1405 |
| 17 | Kalaburgi | 103 | 16 | 84 |
| 18 | Kodagu | 29 | 6 | 0 |
| 19 | Kolar | 200 | 4 | 24 |
| 20 | Koppal | 835 | 116 | 2968 |
| 21 | Mandya | 0 | 0 | 0 |
| 22 | Mysuru | 529 | 81 | 162 |
| 23 | Raichur | 1797 | 146 | 483 |
| 24 | Ramanagara | 0 | 0 | 38 |
| 25 | Shivamogga | 0 | 0 | 445 |
| 26 | Tumkur | 123 | 17 | 6408 |
| 27 | Udupi | 25 | 25 | 1833 |
| 28 | Uttar kannada | 1021 | 0 | 930 |
| 29 | Vijayapura | 23 | 0 | 236 |
| 30 | Yadgiri | 198 | 31 | 226 |
| 31 | Vijayanagara | 0 | 0 | 912 |
| | **Total** | **11172** | **1252** | **48512** |

ಆಯುಕ್ತರು,
ಆರೋಗ್ಯ ಮತ್ತು ಕು.ಕ ಸೇವೆಗಳು
ಬೆಂಗಳೂರು

## ಅನುಬಂಧ- 02

ಸ್ವಾಮಿ ವಿವೇಕಾನಂದ ಯುತ್ ಮೂಮೆಂಟ್ ಟ್ರಸ್ಟ್ ರವರ DATA

**July 2023 to October 2023**

| District | Total no of patients registered | Active Patients in October | Deaths in the reporting period | No of patients seen in OPD | No. of Patients seen in home care | No. of patients in institution care | No. of patients on Morphine | No. of cancer patients | No. of non cancer patients | No. of pts provided physiotherapy | No. of patients offered counselling |
|---|---|---|---|---|---|---|---|---|---|---|---|
| Mysuru | 4528 | 694 | 70 | 568 | 904 | 240 | 64 | 589 | 731 | 103 | 86 |
| Hassan | 1284 | 646 | 55 | 148 | 500 | 119 | 13 | 410 | 818 | 258 | 49 |
| Bengaluru | 246 | 118 | 26 | NA | 166 | NA | 0 | 29 | 195 | 32 | 48 |
| Dharwad | 304 | 212 | 10 | NA | 169 | NA | 0 | 12 | 326 | 32 | 102 |
| Saraguru | 842 | 242 | 14 | 196 | 101 | 31 | 1 | 21 | 224 | 5 | 197 |
| Total | 7204 | 1912 | 175 | 912 | 1840 | 390 | 78 | 1061 | 2294 | 430 | 482 |

ಆಯುಕ್ತರು,
ಆರೋಗ್ಯ ಮತ್ತು ಕು.ಕ ಸೇವೆಗಳು
ಬೆಂಗಳೂರು